NP – 002

B.Sc 2

# ಮೊದಲ ಸೆಮಿಸ್ಟರ್ ಬಿ.ಎಸ್ಸಿ. ಪರೀಕ್ಷೆ, ಜನವರಿ/ಫೆಬ್ರವರಿ 2025
## (NEP Scheme)
## (Repeaters)
## ಕನ್ನಡ ಭಾಷಾ ಪತ್ಯ (ಪತ್ರಿಕೆ – 1)
## ವಿಜ್ಞಾನ ಕನ್ನಡ – 1

Time : 2½ Hours  Max. Marks : 60

I. **ನಾಲ್ಕು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**80** ಪದಗಳಿಗೆ ಮೀರದಂತೆ) : **(4×5=20)**

1) ಪ್ರಾಚೀನ ಗ್ರೀಕ್ ಸಂಸ್ಕೃತಿಯ ಜೊತೆಗೆ ಕನ್ನಡ ಭಾಷೆ ಹೊಂದಿದ್ದ ಸಂಬಂಧವನ್ನು ವಿಶ್ಲೇಷಿಸಿ.

2) ಕುವೆಂಪು ಕನ್ನಡಿಗರಿಗೆ ಯಾವ ದೀಕ್ಷೆ ಕೊಡುತ್ತಾರೆ ? ತಿಳಿಸಿ.

3) ಅಕ್ಕನ ವಚನದಲ್ಲಿ ಇರುವ ಭಕ್ತಿಯ ನಿರೂಪಣೆಯನ್ನು ಕುರಿತು ಬರೆಯಿರಿ.

4) ವೈಜ್ಞಾನಿಕ ಮನೋಧರ್ಮದ ಬೆಳವಣಿಗೆಯಲ್ಲಿ ಶಿಕ್ಷಣದ ಪಾತ್ರವೇನು ?

5) ಪ್ರಕೃತಿ ವ್ಯವಸ್ಥೆಗೆ ಜೈವಿಕ ವೈವಿಧ್ಯದ ಕೊಡುಗೆ ಏನು ?

6) ಲೇಖಕರು ಬೀಡಾದಂತೆ ಸುರಳಿ ಸುತ್ತಿದ ಎಲೆಯನ್ನು ಮೊದಲು ಕಂಡಾಗ ಆದ ಅನುಭವವೇನು ?

Library, Bangalore-560013

II. **ಎರಡು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**160** ಪದಗಳಿಗೆ ಮೀರದಂತೆ) : **(2×10=20)**

1) ತ್ರಿಭಾಷಾ ಸೂತ್ರ ಎಂಬ ತ್ರಿಶೂಲದಿಂದ ಪಾರಾಗಲು ಕುವೆಂಪು ತೋರುವ ದಾರಿಗಳಾವುವು ? ವಿವರಿಸಿ.

2) ಪಾಹಾಂನ ಭೂಮಿಯ ಮೇಲಿನ ಮೋಹದ ವಿವಿಧ ಹಂತಗಳಾವುವು ? ವಿವರಿಸಿ.

3) ಕಾಯಿಲೆಗಳಿಗೂ ಮೌಢ್ಯಗಳಿಗೂ ಯಾವ ಬಗೆಯ ಸಂಬಂಧ ಬೆಳೆದಿದೆ ? ವಿವರಿಸಿ.

III. ಕೆಳಕಂಡ ಪತ್ಯವನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆ ನೀಡಿ : **(1×3=3)**

ಸಾಹಿತ್ಯಕ್ಕೆ ಮಾತ್ರ ಅಗಾಧ ಕಲ್ಪನೆಯ ಅಗತ್ಯವಿದೆ ಎಂಬುವುದು ಅಷ್ಟು ಸರಿಯಲ್ಲ. ನಿಜವಾಗಿ ನೋಡಿದರೆ ವಿಜ್ಞಾನಕ್ಕೆ ಆ ಕಲ್ಪನೆಯ ಅವಶ್ಯಕತೆ ಮತ್ತೂ ಹೆಚ್ಚಿನದು. ಕಣ್ಣಿಗೆ ಕಾಣದ ಪರಮಾಣು ಒಳಗಿನ ಜಗತ್ತನ್ನು ಕೇವಲ ಕಲ್ಪನೆಯ ಕಣ್ಣುಗಳಿಂದ ಊಹಿಸಬೇಕು. ಅದರ ಹೊರ ಪರಿಣಾಮಗಳನ್ನು ಅಧ್ಯಯನ ಮಾಡಿ ಒಳ ಅಂತರಂಗವನ್ನು ಅರಿಯಬೇಕು. ಅಂತಹ ಅಣುವಿನೊಳನುಗ್ಗುವ, ಇಡೀ ವಿಶ್ವವನ್ನಾರಿಸುವ, ಅತಿಸೂಕ್ಷ್ಮವನ್ನು ಅತ್ಯಂತ ಅಗಾಧವಾದುದನ್ನು ಕಾಣಲು ಕಲ್ಪನೆಯ ಕಣ್ಣುಗಳು, ಬೇಕು. ವಿಜ್ಞಾನದ ಎಲ್ಲಾವನ್ನೂ ಕಣ್ಣಿನಿಂದ ಕಾಣಲಾಗದು. ಕಿವಿಯಿಂದ ಕೇಳಲಾಗದು, ಸ್ಪರ್ಶಿಸಿ ಅನುಭವಿಸಲಾಗದು. ಒಂದು 'ಗೇರ್' ಹೇಗೆ ಕೆಲಸ

ಮಾಡುತ್ತದೆಂದು ಬಿಚ್ಚಿ ಬಿಡಿಸಿ ನೋಡಬಹುದು. ಆದರೆ ಒಂದು ದೂರದರ್ಶನದ ಉಪಕರಣವನ್ನು ಹಾಗೆ ಕಿತ್ತು , ಪಟಲದ ಮೇಲೆ ಎಲೆಕ್ಟ್ರಾನುಗಳ ಓಟವನ್ನು ನಾಟ್ಯವನ್ನು ಕಣ್ಣಿನಿಂದ ನೋಡಲು ಸಾಧ್ಯವಿಲ್ಲ. ಬೆಳಕನ್ನೂ ಹೊರ ಬಿಡದೆ ಹಿಡಿದು ಜಗ್ಗುವ ಕಪ್ಪೆ ಕುಳ್ಳಿಗಳನ್ನು ಕಾಣಲು ಸಾಧ್ಯವಿಲ್ಲ. ರೇಡಿಯೋ, ದೂರದರ್ಶನಗಳ ಸಾಧ್ಯವಾಗಿರಿಸುವ ವಿದ್ಯುತ್ ಕಾಂತೀಯ ತರಂಗಗಳನ್ನು ಸ್ಪರ್ಶಿಸಲಾಗದು. ಪಂಚೇಂದ್ರಿಯಗಳ ಅನುಭವಕ್ಕೆ ನಿಲುಕದ ಇವೆಲ್ಲವನ್ನೂ ವಿಜ್ಞಾನಿ ಕಂಡುಹಿಡಿದಿದ್ದು ಹೇಗೆ ಎಂದು ಅಚ್ಚರಿಯಾಗದೆ ಇರದು. ಕಲ್ಪನೆಯಿಲ್ಲದೆ ಕೇವಲ ಹಿಡಿ ಹಿಡಿ ಸಮೀಕರಣಗಳಾಗುತ್ತದೆ, ಕಂಡು ಹಿಡಿ ಸಮೀಕರಣಗಳಾಗುತ್ತದೆ. ಗಣಿತದ ಅಂಕೆ ಸಂಖ್ಯೆಗಳಾಗಿ ಅರ್ಥ ಕಳೆದುಕೊಳ್ಳುತ್ತದೆ. ವಿಜ್ಞಾನ-ವಾಸ್ತವ ದತ್ತಾಂಶಗಳ ಮೇಲೆ ಕಲ್ಪನೆಯ ಸವಾರಿ ಹೊರಟು, ಬುದ್ಧಿಗೆ ಹೊಳೆಯುವ ವಿಚಾರಗಳು : ಆಕಾಶದ ವಿಸ್ತಾರವನ್ನು ಮೊದಲ ಕಲ್ಪನೆಯ ಕಣ್ಣುಗಳಿಂದಷ್ಟೆ ಅಳೆಯಬೇಕು. ಆ ಅಳತೆಗೆ ವೈಜ್ಞಾನಿಕ ವಿಧಾನಬೇಕು.

IV. ಸಂಕ್ಷೇಪ ಮಾಡಿದ ಮೇಲಿನ ಬರಹವನ್ನು ಆಧರಿಸಿ ಎರಡು ಪ್ರಶ್ನೆಗಳನ್ನು ರೂಪಿಸಿ. **(2×1=2)**

V. ಇವುಗಳಲ್ಲಿ **ಎರಡು** ಪದಗಳಿಗೆ ಸ್ವಂತ ವಾಕ್ಯ ರಚಿಸಿ : **(2×1=2)**

1) ಹೋರಾಟ

2) ಸಂಶಯ

3) ಅಸಮಾನತೆ

4) ಸಂಪ್ರದಾಯ.

VI. ಸಾರ್ವಜನಿಕ ಶೌಚಾಲಯ ಒದಗಿಸಿಕೊಡುವಂತೆ ಕೋರಿ ಪುರಸಭೆ/ನಗರಸಭೆಯ ಅಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ. **(1×4=4)**

VII. ಇವುಗಳಲ್ಲಿ **ನಾಲ್ಕು** ಪದಗಳಿಗೆ ಅರ್ಥ ಬರೆಯಿರಿ : **(4×1=4)**

1) ಇಳೆ

2) ಜಲ

3) ಕಲಿ

4) ವಿಕಾಸ

5) ಭಾಳಲೋಚನ

6) ದೃಷ್ಟಿ

VIII. ಇವುಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸಿ ಬರೆಯಿರಿ. (ಎಲ್ಲಾ **ಐದು** ಪ್ರಶ್ನೆಗಳಿಗೆ ಉತ್ತರಿಸಿ) **(5×1=5)**

1) ಇಸಿಲ ಪದ ಯಾವ ಭಾಷೆಯಲ್ಲಿ ಇದೆ ?

ಎ) ಗ್ರೀಕ್ ಬಿ) ಪ್ರಾಕೃತ ಸಿ) ಅರೇಬಿಕ್ ಡಿ) ಫ್ರೆಂಚ್

2) ಸಾಹಸಭೀಮ ವಿಜಯಂ ಕೃತಿ ಬರೆದವರು ಯಾರು ?

ಎ) ಪಂಪ ಬಿ) ರನ್ನ ಸಿ) ಜನ್ನ ಡಿ) ಕುಮಾರವ್ಯಾಸ

3) ಅಕ್ಕಮಹಾದೇವಿಯ ವಚನಗಳ ಅಂಕಿತ ಯಾವುದು ?

ಎ) ಕೂಡಲಸಂಗಮ ಬಿ) ರಾಮನಾಥ

ಸಿ) ಮಲ್ಲಿಕಾರ್ಜುನ ಡಿ) ಚೆನ್ನಮಲ್ಲಿಕಾರ್ಜುನ

4) ಖಗೋಳ ಶಾಸ್ತ್ರದ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ ?

ಎ) ಕೋಪರ್ನಿಕಸ್ ಬಿ) ಮೇರಿಕ್ಯೂರಿ

ಸಿ) ಹಾಕಿಂಗ್ ಡಿ) ನ್ಯೂಟನ್

5) ಕಿರಗೂರಿನ ಗಯ್ಯಾಳಿಗಳು ಕೃತಿ ಬರೆದವರು ಯಾರು ?

ಎ) ಕುವೆಂಪು ಬಿ) ಶಿವರಾಮ ಕಾರಂತ

ಸಿ) ತೇಜಸ್ವಿ ಡಿ) ಅನಂತಮೂರ್ತಿ